



ಗೌರಿ ಎನ್ನುವ ಹೆಸರು ನಮ್ಮ ಭಾವಲೋಕದಲ್ಲಿ ಎಷ್ಟರಮಟ್ಟಿಗೆ ಬೆರೆತುಹೋಗಿದೆಯೆಂದರೆ, ಆ ಹೆಸರಿನ ಜೊತೆಗೆ ಅಂತಃಕರಣದ ಆರ್ದ್ರತೆ ಮನಸ್ಸು ತುಂಬುತ್ತದೆ. ಶಿರಸಿಯ ಗೌರಿ ಅವರೂ ಅಷ್ಟೇ; ಹೆಸರಿನಲ್ಲಿನ ಅಂತಃಕರಣ ಅವರ ನಡೆ–ನುಡಿಯಲ್ಲೂ ಇದೆ.

ಈ ಗೌರಮ್ಮನನ್ನು 'ಬಾವಿ ಗೌರಮ್ಮ' ಎಂದು ಕರೆಯುವುದೇ ಹೆಚ್ಚು ಸರಿ. ಎರಡು ಬಾವಿಗಳನ್ನು ಏಕಾಂಗಿಯಾಗಿ ತೋಡಿದವಳು ಈ ತಾಯಿ. ಈಗ, ಅಂಗನವಾಡಿ ಮಕ್ಕಳಿಗಾಗಿ ಮೂರನೇ ಬಾವಿ ತೋಡುವ ಸಾಹಸಕ್ಕೆ ಮುಂದಾದ ಗೌರಮ್ಮನ ಪ್ರಯತ್ನ ರಾಜ್ಯದ ಗಮನಸೆಳೆದಿದೆ.

ಕೆಲವು ವರ್ಷಗಳ ಹಿಂದೆ ಕುಟುಂಬವನ್ನು ಬಾಧಿಸುತ್ತಿದ್ದ ನೀರಿನ ಸಮಸ್ಯೆಯೇ ಗೌರಿ ಅವರು ಬಾವಿ ತೋಡಲು ಕಾರಣವಾಯಿತು. ಮನೆಯಲ್ಲಿ ಕುಡಿಯಲು ನೀರಿಲ್ಲದ ಸ್ಥಿತಿ, ಮಕ್ಕಳು ನೀರಿಗಾಗಿ ಮೈಲಿಗಟ್ಟಲೆ ನಡೆಯುವ ಪರಿಸ್ಥಿತಿ. ನೆಟ್ಟು ಸಲಹಿದ ಗಿಡಗಳ ಎಲೆಗಳು ಒಣಗಿದ್ದನ್ನು ನೋಡಿ ತಾಯಿಹೃದಯ ಕರಗಿತು. ಸುಮ್ಮನೆ ಕೂತರೆ ಸುಖವಿಲ್ಲ ಎಂದುಕೊಂಡು, ಏಕಾಂಗಿಯಾಗಿ ಬಾವಿ ತೆಗೆಯಲು ನಿರ್ಧರಿಸಿದರು.

ಒಂಟಿಯಾಗಿ ಬಾವಿ ತೆಗೆಯುವುದು ಸುಲಭದ ಕೆಲಸವೇ? ಕೆಲಸ ತಿಂಗಳುಗಟ್ಟಲೆ ಹಿಡಿಯಿತು. ಮಣ್ಣು ಅಗೆದರು, ರಾಶಿ ಬಿದ್ದ ಮಣ್ಣನ್ನು ತಾವೇ ಎತ್ತಿ ಹಾಕಿದರು. ಕೊನೆಗೊಮ್ಮೆ ಬಾವಿಯಲ್ಲಿ ನೀರು ಕಾಣಿಸಿಕೊಂಡಾಗ ಗೌರಮ್ಮನ ಅಂತರಂಗದಲ್ಲೂ ಗಂಗಾವತರಣ. ಹೀಗೆ ತೆಗೆದ ಬಾವಿ ಮನೆಯ ಬಾಯಾರಿಕೆಯನ್ನು ತಣಿಸಿದ್ದು ಮಾತ್ರವಲ್ಲ, ಗಿಡಗಳ ಮುಖದಲ್ಲೂ ನಗು ಕಾಣಿಸಿತು.

ಕುಟುಂಬಕ್ಕಾಗಿ ಮೊದಲನೇ ಬಾವಿ ತೆಗೆದ ಗೌರಿ, ಎರಡನೇ ಬಾರಿ ಮಣ್ಣಿನೊಂದಿಗೆ ಗುದ್ದಾಡ ತೊಡಗಿದ್ದು ಅಡಿಕೆ ಸಸಿಗಳಿಗಾಗಿ. ತೋಟದಲ್ಲಿನ ಅಡಿಕೆ ಸಸಿಗಳು ನೀರಿನ ಕೊರತೆಯಿಂದ ಬಾಡತೊಡಗಿದಾಗ, ಮತ್ತೆ ಬಾವಿ ತೋಡಿದರು. ಗೌರಿಯ ಸಂಕಲ್ಪಶಕ್ತಿಗೆ ಗಂಗೆ ಒಲಿದಳು.

ಗೌರಿ ಅವರಿಗೀಗ 57 ವರ್ಷ. ಹಿರಿಯ ನಾಗರಿಕರ ಕ್ಲಬ್ಬಿಗೆ ಸಮೀಪದಲ್ಲಿರುವ ಈ ತಾಯಿ, ಮೂರನೇ ಸಲ ಬಾವಿ ತೋಡಲು ಮುಂದಾದುದಕ್ಕೆ ಕಾರಣ ಅಂಗನವಾಡಿ ಮಕ್ಕಳ ಬಾಯಾರಿಕೆ. ತಾವು ಕೆಲಸ ಮಾಡುವ ಅಂಗನವಾಡಿಗೆ ನೀರಿನ ಆಸರೆಯಿಲ್ಲ ಎನ್ನುವ ಸಂಗತಿ ಕಾಡತೊಡಗಿ, ಅದಕ್ಕೆ ಉತ್ತರದ ರೂಪದಲ್ಲಿ ಬಾವಿ ತೋಡತೊಡಗಿದ್ದಾರೆ. ಎರಡು ಬಾರಿ ಸ್ವಹಿತಕ್ಕಾಗಿ ಬಾವಿ ತೋಡಿದ ತಾಯಿ, ಈಗ ಮಕ್ಕಳ ಕಾಳಜಿಯಿಂದ ಬಾವಿ ತೋಡುವ ಸಾಹಸಕ್ಕೆ ಮುಂದಾಗಿದ್ದಾರೆ. ಎಂದಿನಂತೆ ಈ ಬಾರಿಯೂ ಏಕ ವ್ಯಕ್ತಿ ಕಾರ್ಯಾಚರಣೆ.

ಪುಟ್ಟ ಮಕ್ಕಳ ದಾಹ ತಣಿಸಲು ಬಾವಿ ತೋಡುವ ಈ ಗಟ್ಟಿಗಿತ್ತಿಯ ಕೆಲಸ ಮೊದಲೆರಡು ಬಾರಿಯಷ್ಟು ಸಲೀಸಾಗಿರಲಿಲ್ಲ. ಬಾವಿ ಆಳಕ್ಕಿಳಿದಂತೆ, ಗೌರಿಯವರ ಸಾಹಸ ಮಾಧ್ಯಮಗಳಲ್ಲಿ ಸುದ್ದಿಯಾಯಿತು. ಅಂಗನವಾಡಿಗೆ ನೀರಿನ ಆಸರೆ ಕಲ್ಪಿಸಿಕೊಡದ ಅಧಿಕಾರಿಗಳು, ತಮ್ಮ ಕೆಲಸವನ್ನು ಬೇರೊಬ್ಬರು ಮಾಡತೊಡಗಿದಾಗ ಸುಮ್ಮನಿರಲಿಲ್ಲ. 'ಈ ಬಾವಿ ತೋಡಲು ಅನುಮತಿ ಪಡೆದಿಲ್ಲ' ಎಂದು ತಕರಾರು ತೆಗೆದರು. ಸಹೃದಯರು ಮತ್ತು ಮಾಧ್ಯಮಗಳ ಮಧ್ಯಪ್ರವೇಶದಿಂದ ಅನುಮತಿ ದೊರೆತರೂ, ಮತ್ತೊಮ್ಮೆ ಅಧಿಕಾರಿಗಳೇ ಅಡ್ಡಗಾಲು ಹಾಕಿದರು. ಒತ್ತಡದಿಂದಾಗಿ ಮತ್ತೆ ಅನುಮತಿ.

ಗೌರಿ ನಾಯ್ಕ ಅವರಿರುವುದು ಶಿರಸಿಯಂಚಿನ ಸೌಲಭ್ಯವಂಚಿತ ಹಾಗೂ ಹಿಂದುಳಿದ ಪ್ರದೇಶ ಗಣೇಶನಗರದಲ್ಲಿ. ಇಲ್ಲಿ ಕೂಲಿ ಮಾಡಿ ಜೀವನ ನಿರ್ವಹಣೆ ಮಾಡುವ ಜನರೇ ಹೆಚ್ಚು ವಾಸವಾಗಿದ್ದಾರೆ. ಬೆಳಿಗ್ಗೆ ಎದ್ದು ಕೆಲಸಕ್ಕೆ ಹೋದರೆ, ಮನೆಗೆ ಮರಳುವುದು ಸೂರ್ಯ ಮುಳುಗಿದ ನಂತರವೇ. ಉಸಿರುಗಟ್ಟುವಷ್ಟು ಆಳದಲ್ಲಿ ಯಾರ ಸಹಾಯವಿಲ್ಲದೆ ಒಂಟಿಯಾಗಿ ಬಾವಿ ತೋಡಿ ಬಾಯಾರಿದವರಿಗೆ ನೀರುಣಿಸುವ ಕಾರ್ಯ ಮಾಡುವ ಈ ತಾಯಿಗೆ, ಪ್ರತಿಫಲದ ನಿರೀಕ್ಷೆಯಿಲ್ಲ. ನೀರು ಚಿಮ್ಮಿದಾಗ ಮನಸ್ಸಿನಲ್ಲಿಯೂ ಉಕ್ಕುವ ಸಂತೋಷವೇ ಅವರು ನಿರೀಕ್ಷಿಸುವ ಪ್ರತಿಫಲ.

ಮೊದಲ ಬಾವಿಯಿಂದ ಮನೆಗೆ ನೀರು ಬಂತು.